**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.</u>**

ಸಿ.ಸಿ.ನಂಃ **8325/2022** ಸಿ.ಡಬ್ಲ್ಯೂ –**14** ಪಿ.ಡಬ್ಲ್ಯೂ -**13**

| | | |
|---|---|---|
| ಹೆಸರು | ಃ | ಇಕ್ರಮ ಪಾಶಾ |
| ತಂದೆಃಗಂಡ | ಃ | ಮಹ್ಮಮದ ಅಕ್ಬರ |
| ವಯಸ್ಸು | ಃ | **57** ವರ್ಷ |
| ಉದ್ಯೋಗ | **:** | ಹಿರಿಯ ಮೋಟಾರು ವಾಹನ ನೀರಿಕ್ಷಕರು ಆರ್ ಟಿ ಓ ಕಲಬುರಗಿ |
| ವಾಸಸ್ಥಳ | ಃ | ಕಲಬುರಗಿ |

ದಿನಾಂಕಃ **04.09.2025**

ಸತ್ಯ ಪ್ರತಿಜ್ಞೆಯ ಮೇರೆಗೆ

---

**<u>ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ</u>**

ನಾನು ಡಿಸೇಂಬರ ೨೦೧೮ ರಿಂದ ಇಲ್ಲಿಯವರೆಗೆ ಕಲಬುರಗಿಯಲ್ಲಿ ಹಿರಿಯ ಮೋಟಾರು ವಾಹನ ನೀರಿಕ್ಷಕ ಅಂತಾ ಕಾರ್ಯ ನಿರ್ವಹಿಸುತ್ತಿದ್ದೇನೆ.

ದಿಃ 03-06-2022 ರಂದು ಬೆಳ್ಳಿಗೆ 8.15 ಕ್ಕೆ ಸಿ.ಪಿ.ಐ ಆಳಂದರವರ ಕೋರಿಕೆಯ ಮೇರೆಗೆ, ಅದೆ ದಿನ ಮಧ್ಯಾಹ 2.50 ಗಂಟೆಗೆ ನರೋಣಾ ಪೋಲಿಸ್ ಠಾಣೆಗೆ ಭೇಟಿ ನೀಡಿ ಅಲ್ಲಿ ಅಪಘಾತಕ್ಕೆ ಒಳಗಾದ ವಾಹನವಾದ ಕೆ ಎ 48/ಎಮ-0521, ಎಲ್ ಎಮ ವಿ ಓಮಿನಿ ಬಸ್ಸ ಮತ್ತು ಕೆ ಎ 32/ಇಸಿ-4466 ವಾಹನವನ್ನು ಪರಿಶೀಲಿಸಲಾಗಿ ಕೆ ಎ 48/ಎಮ-0521 ಇದರಲ್ಲಿ ಈ ಕೆಳಗಿನಂತೆ ಕಂಡು ಬಂದಿರುತ್ತದೆ. ಮುಂದಿನ ಭಂಪರ ಜಖಂಗೊಂಡಿತ್ತು, ಎಡಗಡೆಯ ಹೆಡ್ಡಲೈಟ್ ಜಖಂಗೊಂಡಿತ್ತು. ಬಲಗಡೆಯ ಮುಂದಿನ ಭಾಗಿಲು ಗಿಚುಗಳು ಕಂಡು ಬಂದಿದ್ದು, ಬಲಭಾಗದ ಹಿಂದಿನ ಬಾಗಿಲು ಅದರ ಕಿಟಕಿ ಗ್ಲಾಸು ಜಖಂಗೊಂಡಿತ್ತು. ಕೆ ಎ 32/ಇಸಿ-4466 ವಾಹನವನ್ನು ಪರಿಶೀಲಿಸಲಾಗಿ ಇದರಲ್ಲಿ ಈ ಕೆಳಗಿನಂತೆ ಕಂಡು ಬಂದಿರುತ್ತದೆ. ಮುಂದಿನ ಚಕ್ರದ ಹಾಗೂ ಅದರ ಮಡ್ಡಗಾರ್ಡ ಜಖಂ ಗೊಂಡಿತ್ತು ಹಾಗೂ ಮುಂದಿನ ಶಾಖ ಅಬ್‌ಜಾರ್ಬರ್ಸ ಅಸೆಂಬಲ್ ಜಖಂಗೊಂಡಿತ್ತು. ಮುಂದಿನ ಹೆಡ್ಡಲೈಟ್ ಹಾಗೂ ಇಂಡಿಕೇಟರಗಳು ಜಖಂಗೊಂಡಿತ್ತು ಹಾಗೂ ಮುಂದಿನ ಸೇಫಿ ಗಾರ್ಡ ಬಲಭಾಗದಲ್ಲಿ ನೆಗ್ಗಿತ್ತು. ಸ್ಟೇರಿಂಗ್ ವಿಲ್ ಹಾಗೂ ಸ್ಪಿಡೋ ಮೀಟರ ಜಖಂಗೊಂಡಿತ್ತು. ಎರಡು ಕಡೆಯ ರಿಯರ್ ವಿವೂ್ಯ ಕನ್ನಡಿಗಳು

ಜಖಂಗೊಂಡಿತ್ತು. ರಿಯರ್ ಎಡಗಡೆಯ ಹಿಂಬದಿಯ ಇಂಡಿಕೇಟರ ಜಖಂಗೊಂಡಿತ್ತು. ವಾಹನ ಸಃ ಕೆ. ಎ. 32/ಇಸಿ-4466 ವಾಹನವನ್ನು ನಿಂತಲ್ಲಿ ಪರೀಶಿಲನೆ ಮಾಡಲಾಗಿ ಅದರ ಬ್ರೇಕ್ ಸೀಸ್ಟಮ ಸರಿಯಾಗಿ ಇತ್ತು. ಕೆ ಎ 48/ಎಮ-0521 ಓಡಿಸಿ ನೋಡಲಾಗಿ ಬ್ರೇಕ್ ಸೀಸ್ಟಮ ಸರಿಯಾಗಿ ಇತ್ತು. ನನ್ನ ಅಭಿಪ್ರಾಯದ ಪ್ರಕಾರ ಸದರಿ ಅಪಘಾತವು ವಾಹನಗಳ ಯಾವುದೇ ತಾಂತ್ರಿಕದೋಷದಿಂದ ಆಗಿರುವುದಿಲ್ಲ ಅಂತಾ ಕಂಡು ಬಂದಿರುತ್ತದೆ. ಈ ಬಗ್ಗೆ ನಾನು ಪ್ರಮಾಣ ಪತ್ರವನ್ನು ನೀಡಿರುತ್ತೇನೆ.

ಸಾಕ್ಷಿಯು ಎಮ.ವಿ.ಯ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 10 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 10-ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ. ಎಸ್ ಎಸ್ ಸಿ ವಕೀಲರಿಂದಃ

ನನಗೆ ಪೋಲಿಸ್ ಠಾಣೆಯಿಂದ ಮನವಿ ಪತ್ರವನ್ನು ಬಂದಿತ್ತು ಸದರಿ ದಾಖಲೆಯು ನಮ್ಮ ಕಚೇರಿಯ ಆವಾಕ ಜಾವಕ ವಿಭಾಗದಲ್ಲಿ ಬಂದಿತ್ತು. ಸದರಿ ದಾಖಲೆಯು ಸಿ.ಪಿ.ಐ ಅವರಿಂದ ಬಂದಿತ್ತು. ಸದರಿ ದಾಖಲೆಯ ಮೇಲೆ ವಾಹನಗಳನ್ನು ಪರೀಶಿಲನೆ ಮಾಡಬೇಕೆಂದು ನಮೂದಿಸಿದ್ದರು. ವಾಹನವನ್ನು ಪರೀಶಿಲನೆ ಮಾಡಿದಾಗ ನೀವು ಬ್ರೇಕ್ ಆಯಿಲನ್ನು ಪರೀಶಿಲನೆ ಮಾಡಿದ್ದಿರಾ ಎಂದರೆ ಸಾಕ್ಷಿಯು ಕೆ.ಎ-48/ಎಮ-0521 ಕ್ರೂಜರ ವಾಹನಕ್ಕೆ ವ್ಯಾಕ್ಯುಮ ಆಫರೇಟಿವ್ ಇರುವುದರಿಂದ ಬ್ರೇಕ್ ಆಯಿಲನ್ನು ಪರೀಶಿಲಿಸುವ ಅವಶ್ಯಕತೆ ಇರುವುದಿಲ್ಲ ಎನ್ನುತ್ತಾರೆ. ಸದರಿ ವಾಹನದ ಟೈರ ಲೈಫನ್ನು ಪರೀಶಿಲನೆ ಮಾಡಿರುತ್ತೇನೆ. ಸದರಿ ಟೈರಗಳ ಡ್ಯಾಮೆಜನ್ನು ನಾನು ನಮೂದು ಮಾಡಿರುವುದಿಲ್ಲ. ಸದರಿ ಟೈರಗಳು ಎಷ್ಟು ಸವೇದಿತ್ತು ಎಂದರೆ ಸಾಕ್ಷಿಯು ನನಗೆ ನೆನಪು ಇಲ್ಲ. ಸದರಿ ವಿಷಯವನ್ನು ನನ್ನ ವರದಿಯಲ್ಲಿ ನಮೂದಿಸಿರುವುದಿಲ್ಲ. ಸಾಮಾನ್ಯವಾಗಿ ಟೈರುಗಳು ಸವೆದಾಗ ಅಪಘಾತಗಳು ಆಗುವ ಸಂಭವ ಇರುತ್ತದೆ ಎಂದರೆ ಸರಿ. ನಾನು ವಾಹನಗಳನ್ನು ಪರೀಶಿಲನೆ ಮಾಡಿದ ಬಗ್ಗೆ ಛಾಯಾ ಚಿತ್ರಗಳನ್ನು ತೆಗೆದಿರುವುದಿಲ್ಲ. ಸಾಮಾನ್ಯವಾಗಿ ದ್ವಿಚಕ್ರ ವಾಹನವನ್ನು ನಿಂತಲ್ಲೆ ಪರೀಶಿಲನೆ ಮಾಡಿದಾಗ ಅದರ ಬ್ರೇಕ್ ಸೀಸ್ಟಂ ಸರಿಯಾಗಿ ಕೆಲಸ ಮಾಡುವ ಬಗ್ಗೆ ಗೊತ್ತಾಗುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ವಾಹನವನ್ನು ಹೆಚ್ಚಿಗೆ ಚಲಾಯಿಸಿದಾಗ ಬ್ರೆಕ್ ಸೀಸ್ಟಂ ಕೆಲಸ ಮಾಡುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ವರದಿಯಲ್ಲಿ ಸದರಿ ವಾಹನದಲ್ಲಿ ಮೊದಲೇ ಇದ್ದ ತೊಂದರೆಗಳು ಮತ್ತು ಹೊಸದಾಗಿ ಆದ ಜಖಂನ್ನು ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ನಾನು ಪರೀಶಿಲನೆ ಮಾಡಿದಾಗ ಏನು ಕಂಡು ಬಂದಿರುತ್ತದೆ ಅದನ್ನು ನಮೂದು ಮಾಡಿರುತ್ತೇನೆ ಎನ್ನುತ್ತಾರೆ. ಹೊಸದಾಗಿ ಜಖಂಗೊಂಡಿದ್ದು ಮತ್ತು ಹಳೆಯದಾಗಿ ಜಖಂಗೊಂಡ ಬಗ್ಗೆ

ಗೊತ್ತಾಗುತ್ತದೆ ಎಂದರೆ ಸರಿ. ನಾನು ನನ್ನ ವರದಿಯಲ್ಲಿ ಹೊಸದಾಗಿ ಜಖಂಗೊಂಡ ಮತ್ತು ಹಳೆಯದಾಗಿ ಜಖಂಗೊಂಡ ಬಗ್ಗೆ ನಮೂದು ಮಾಡಿರುವುದಿಲ್ಲ.

ನಾನು ಡಿಸೇಂಬರ ೨೦೧೮ ರಿಂದ ಇಲ್ಲಿಯವರೆಗೆ ಕಲಬುರಗಿಯಲ್ಲಿ ಹಿರಿಯ ಮೋಟಾರು ವಾಹನ ನೀರಿಕ್ಷಕ ಅಂತಾ ಕಾರ್ಯ ನಿರ್ವಹಿಸುತ್ತಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 03-06-2022 ರಂದು ಬೆಳ್ಳಿಗೆ 8.15 ಕ್ಕೆ ಸಿ.ಪಿ.ಐ ಆಳಂದರವರ ಕೋರಿಕೆಯ ಮೇರೆಗೆ, ಅದೆ ದಿನ ಮಧ್ಯಾಹ 2.50 ಗಂಟೆಗೆ ನರೋಣಾ ಪೋಲಿಸ್ ಠಾಣೆಗೆ ಭೇಟಿ ನೀಡಿ ಅಲ್ಲಿ ಅಪಘಾತಕ್ಕೆ ಒಳಗಾದ ವಾಹನವಾದ ಕೆ ಎ 48/ಎಮ-0521, ಎಲ್ ಎಮ ವಿ ಓಮಿನಿ ಬಸ್ಸ ಮತ್ತು ಕೆ ಎ 32/ಇಸಿ-4466 ವಾಹನವನ್ನು ಪರಿಶೀಲಿಸಲಾಗಿ ಕೆ ಎ 48/ಎಮ-0521 ಇದರಲ್ಲಿ ಈ ಕೆಳಗಿನಂತೆ ಕಂಡು ಬಂದಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದಿನ ಭಂಪರ ಜಖಂಗೊಂಡಿತ್ತು, ಎಡಗಡೆಯ ಹೆಡ್ಡಲೈಟ್ ಜಖಂಗೊಂಡಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಲಗಡೆಯ ಮುಂದಿನ ಭಾಗಿಲು ಗಿಚುಗಳು ಕಂಡು ಬಂದಿದ್ದು, ಬಲಭಾಗದ ಹಿಂದಿನ ಬಾಗಿಲು ಅದರ ಕಿಟಕಿ ಗ್ಲಾಸು ಜಖಂಗೊಂಡಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೆ ಎ 32/ಇಸಿ-4466 ವಾಹನವನ್ನು ಪರಿಶೀಲಿಸಲಾಗಿ ಇದರಲ್ಲಿ ಈ ಕೆಳಗಿನಂತೆ ಕಂಡು ಬಂದಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದಿನ ಚಕ್ರದ ಹಾಗೂ ಅದರ ಮಡ್ಡಗಾರ್ಡ ಜಖಂ ಗೊಂಡಿತ್ತು ಹಾಗೂ ಮುಂದಿನ ಶಾಖ ಅಬ್‌ಜಾರ್ಬರ್ಸ ಅಸೆಂಬಲ್ ಜಖಂಗೊಂಡಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದಿನ ಹೆಡ್ಡಲೈಟ್ ಹಾಗೂ ಇಂಡಿಕೇಟರಗಳು ಜಖಂಗೊಂಡಿತ್ತು ಹಾಗೂ ಮುಂದಿನ ಸೇಫಿ ಗಾರ್ಡ ಬಲಭಾಗದಲ್ಲಿ ನೆಗ್ಗಿತ್ತು. ಸ್ಟೇರಿಂಗ್ ವಿಲ್ ಹಾಗೂ ಸ್ಪೀಡೋ ಮೀಟರ ಜಖಂಗೊಂಡಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎರಡು ಕಡೆಯ ರಿಯರ್ ವಿವ್ಯೂಯ ಕನ್ನಡಿಗಳು ಜಖಂಗೊಂಡಿತ್ತು. ರಿಯರ್ ಎಡಗಡೆಯ ಹಿಂಬದಿಯ ಇಂಡಿಕೇಟರ ಜಖಂಗೊಂಡಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾಹನ ಸಃ ಕೆ. ಎ. 32/ಇಸಿ-4466 ವಾಹನವನ್ನು ನಿಂತಲ್ಲಿ ಪರೀಶಿಲನೆ ಮಾಡಲಾಗಿ ಅದರ ಬ್ರೇಕ್ ಸೀಸ್ಟಮ ಸರಿಯಾಗಿ ಇತ್ತು. ಕೆ ಎ 48/ಎಮ-0521 ಓಡಿಸಿ ನೋಡಲಾಗಿ ಬ್ರೇಕ್ ಸೀಸ್ಟಮ ಸರಿಯಾಗಿ ಇತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಭಿಪ್ರಾಯದ ಪ್ರಕಾರ ಸದರಿ ಅಪಘಾತವು ವಾಹನಗಳ

ಯಾವುದೇ ತಾಂತ್ರಿಕದೋಷದಿಂದ ಆಗಿರುವುದಿಲ್ಲ ಅಂತಾ ಕಂಡು ಬಂದಿರುತ್ತದೆ. ಈ ಬಗ್ಗೆ ನಾನು ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲಃ

ಓ.ಹೇ.ಕೇ.ಸರಿ ಇದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.